**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 811/2025**

**ಸಾಕ್ಷಿಃ ಸಿಡಬ್ಲ್ಯೂಃ 1 , ಪಿ.ಡಬ್ಲ್ಯೂಃ 1**

ಸಾಕ್ಷಿದಾರನ ಹೆಸರು : ವಿಶ್ವನಾಥ ವಿ ಭಟ್ಟ

ತಂದೆಯ ಹೆಸರು : ವಿರುಪಾಕ್ಷ ಶಂಭು ಭಟ್ಟ

ವಯಸ್ಸು : 46 ವರ್ಷ

ಉದ್ಯೋಗ : ಅಬಕಾರಿ ನಿರೀಕ್ಷಕರು, ಭಟ್ಕಳ ವಲಯ.

ವಾಸ್ತವ್ಯ : ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/08/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ದಿಃ 26.05.2021 ರಿಂದ ಇಲ್ಲಿಯವರೆಗೆ ನಾನು ಭಟ್ಕಳ ವಲಯ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

2. ದಿಃ 21.11.2023 ರಂದು ಚಾಸಾ 4 ಮತ್ತು 5 ರವರ ಜೊತೆಯಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಉತ್ತರಕೊಪ್ಪದಲ್ಲಿ ಆರೋಪಿಯು ತಮ್ಮ ಮನೆಯಲ್ಲಿ ಕಳ್ಳಬಟ್ಟಿ ಸರಾಯಿ ತಯಾರಿಸಿ ಮಾರಾಟ ಮಾಡುವ ಉದ್ದೇಶ ಹೊಂದಿದ್ದ ಬಗ್ಗೆ ಮಾಹಿತಿ ಬಂದಿದ್ದು ಅದರಂತೆ ಚಾಸಾ 2 ಮತ್ತು 3 ರವರವನ್ನು ಪಂಚರಾಗಿ ಬರಮಾಡಿ ಶೋಧನಾ ಸಮುಚ್ಚಿತ ವರದಿ ತಯಾರಿಸಿ ಕೃತ್ಯ ನಡೆದ ಸ್ಥಳಕ್ಕೆ ಬಂದು ಆರೋಪಿಗೆ ಅವರ ಹೆಸರು ಕೇಳಿದಾಗ ಅವರು ಬುದಿಯಾ ಮರಾಠಿ ಎಂದು ಹೇಳಿದ್ದು ನಂತರ ನಾವು ಪರಸ್ಪರ ಅಂಗ ಶೋಧನೆ ಮಾಡಿಕೊಂಡು ಸದರಿ ಸ್ಥಳವನ್ನು ಪರಿಶೀಲನೆ ಮಾಡಿದಾಗ ಉತ್ತರಕ್ಕೆ ಮನೆಗೆ ಹೊಂದಿಕೊಂಡು ಇರುವ ಬಚ್ಚಲು ಮನೆಯಲ್ಲಿ ಬಿಳಿಯ ಪ್ಲಾಸ್ಟೀಕ್ ಕ್ಯಾನಿನಲ್ಲಿ 20 ಲೀ ಬೆಲ್ಲದ ಕೊಳೆ ಸಿಕ್ಕಿದ್ದು ಇರುತ್ತದೆ. ಸದರಿ ಸ್ಥಳದ ಚೆಕ್ಕು ಬಂದಿ ಉತ್ತರಕ್ಕೆ ರಸ್ತೆ, ಪೂರ್ವಕ್ಕೆ ಮನೆಯ ಅಂಗಳ , ಪಶ್ಚಿಮಕ್ಕೆ ತೋಟ , ದಕ್ಷಿಣಕ್ಕೆ ಅವರ ಮನೆ ಇದ್ದು ಅವರ ಮನೆಯ ಹಿಂಬಾಗದ ತೋಟದಲ್ಲಿ 2 ಬಿಳಿಯ ಪ್ಲಾಸ್ಟಿಕ್ ಕ್ಯಾನನ್ನು ಹೊಂಡ ತೆಗೆದು ಮುಚ್ಚಿದ್ದು ಅದನ್ನು ಪರಿಶೀಲನೆ ಮಾಡಿದಾಗ 25 ಲೀ ಕಳ್ಳಬಟ್ಟಿ ಪತ್ತೆ ಆಗಿದ್ದು ,1 ಬಿಳಿ ಪ್ಲಾಸ್ಟಿಕ್ ಕ್ಯಾನ್ , 2 ಅಲ್ಯೂಮಿನಿಯಂ ಪಾತ್ರೆ ಸಿಕ್ಕಿದ್ದು ಅದು ಕಳ್ಳಬಟ್ಟಿ ಸರಾಯಿ ಎಂದು ಆರೋಪಿ ಉತ್ತರಿಸಿರುತ್ತಾರೆ. ಬಿಳಿಯ ಪ್ಲಾಸ್ಟಿಕ್ ಕ್ಯಾನ್ ನಿಂದ 500 ಎಮ್ ಎಲ್ನ ತಲಾ 2 ಬಾಟಲನ್ನು ಮಾಧರಿಗೆ ತೆಗದು ಮಾಧರಿ ಚೀಟಿ ಅಂಟಿಸಿ ಮಾಧರಿ ಮೊಹರು ತಯಾರಿಸಲಾಯಿತು. ಸ್ಥಳದ ಚೆಕ್ಕು ಬಂದಿ ಉತ್ತರ ಹಾಗೂ ದಕ್ಷಿಣ ಹಾಗೂ ಪೂರ್ವ ಹಾಗೂ ಪಶ್ಚಿಮಕ್ಕೆ ತೋಟ ಇರುತ್ತದೆ. ಸದರಿ ಪ್ರಕರಣದ ದಾಳಿ , ಶೋಧನೆ , ಜಪ್ತು ಮಾಡಿಕೊಂಡು ಪ್ರಕರಣ ದಾಖಲಿಸಿ ದೂರನ್ನು ದಾಖಲಿಸಿದ್ದು ಇರುತ್ತದೆ. ಶೊಧನೆಯನ್ನು ಬೆಳಿಗ್ಗೆ 7.55 ರಿಂದ 8.30 ರವರೆಗೆ ನಡೆಸಿ ಸ್ಥಳದಲ್ಲಿ 8.30 ರಿಂದ 9.15 ರವರೆಗೆ ಪಂಚನಾಮೆ ತಯಾರಿಸಲಾಯಿತು.

ಸಾಕ್ಷಿದಾರರ ಹೇಳಿಕೆಯನ್ನು ದಿಃ 22.11.2023 ರಂದು ಪಡೆದು , ರಾಸಾಯನಿಕ ವಿಶ್ಲೇಷಣೆಗೆ ದಿಃ 27.11.2023 ರಂದು ಚಾಸಾ 4 ರವರನ್ನು ಕಳುಹಿಸಿ ಅದೇ ದಿನ ಅವರ ವರದಿ ಪಡೆದು ಕಡತಕ್ಕೆ ಲಗತ್ತಿಸಿ ಸಿಬ್ಬಂದಿಯ ಹೇಳಿಕೆ ಪಡೆದಿರುತ್ತೇನೆ. ಚಾಸಾ 4 ರವರು ತಮ್ಮ ಮೊಬೈಲಿನಿಂದ ಫೋಟೋ ತೆಗೆದಿದ್ದು ಅವರ ಕಲಂ 65 ಬಿ ಪ್ರಮಾಣಪತ್ರವನ್ನು 06.12.2023 ರಂದು ಪಡೆದಿರುತ್ತೇನೆ. ಜಪ್ತಾದ ಮುದ್ದೆ ಮಾಲನ್ನು ವಿಲೇವಾರಿಗೆ ಉಪ ಆಯುಕ್ತರಿಗೆ ಪತ್ರ ಬರೆದಿರುತ್ತೇನೆ, ದಿಃ 04.01.2024 ರಂದು ಜಪ್ತಾದ ಮುದ್ದೆ ಮಾಲನ್ನು ಮುಟ್ಟುಗೋಲು ಹಾಕಲು ಉಪ ಆಯುಕ್ತರು ಅದೇಶಿಸಿದ್ದು ಅದನ್ನು ಕಡತಕ್ಕೆ ಲಗತ್ತಿಸಿರುತ್ತೇನೆ. ದಿಃ 08.12.2023 ರಂದು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 7 ರವರಿಗೆ ಹಸ್ತಾಂತರಿಸಿರುತ್ತೇನೆ . ಸಾಕ್ಷಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

2. ಸಾಕ್ಷಿ ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಯು ಶೋಧನಾ ಸಮುಚ್ಚಿತ ಆಧಾರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ– 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ– 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ– 3 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ–4 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತ್ತುಪಟ್ಟಿ ನೋಡಿ ಗುರುತಿಸಿದ್ದು ಅದನ್ನು ನಿಪಿ– 5 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 5 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮಾಧರಿ ಮೊಹರು ನೋಡಿ ಗುರುತಿಸಿದ್ದು ಅದನ್ನು ನಿಪಿ– 6 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ರಾಸಾಯನಿಕ ಪರೀಕ್ಷೆಗೆ ಹೋಗಿ ಬರಲು ಚಾಸಾ 4 ಇವರಿಗೆ ಮಾಡಿದ ಆದೇಶದ ಪ್ರತಿ ನೋಡಿ ಗುರುತಿಸಿದ್ದು ಅದನ್ನು ನಿಪಿ– 7 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 7 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ರಾಸಾಯನಿ ವಿಶ್ಲೇಷಣಾ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ– 8 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 8 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಜೆ ಎನ್ ವಕೀಲರಿಂದ,</u>**

ಸದರಿ ಪ್ರಕರಣದಲ್ಲಿ ನಾನು ಪಿರ್ಯಾದಿದಾರನಾಗಿರುತ್ತೇನೆ. ಅಬಕಾರಿ ಉಪನಿರೀಕ್ಷಕರು ಹೊನ್ನಾವರದವರು ಅಗಿದ್ದಾರೆ. ಸದರಿ ಪ್ರಕರಣ ದಾಖಲಿಸುವಾಗ ಭಟ್ಕಳ ವಲಯದಲ್ಲಿ ಉಪ ನಿರೀಕ್ಷಕರು ಇರಲಿಲ್ಲ. ಸದರಿ ಕಾಲಕ್ಕೆ ಭಟ್ಕಳದ ಪ್ರಭಾರ ಹೊನ್ನಾವರದ ಉಪ ನಿರೀಕ್ಷಕರಿಗೆ ಇತ್ತು. ಹೊನ್ನಾವರ ವಲಯದ ಉಪ ನಿರೀಕ್ಷರಿಗೆ ಪ್ರಭಾರ ಇತ್ತು ಎಂಬ ಬಗ್ಗೆ ದಾಖಲೆಯನ್ನು ಅವರೇ

ದಾಖಲೆಯನ್ನು ಹಾಜರುಪಡಿಸುತ್ತಾರೆ. ಚಾಸಾ 2 ಮತ್ತು 3 ರವರನ್ನು ಹೊರತುಪಡಿಸಿ ಉಳಿದೆಲ್ಲಾ ಸಾಕ್ಷಿದಾರರು ನಮ್ಮ ಸಿಬ್ಬಂದಿಗಳು ಆಗಿದ್ದಾರೆ. ಘಟನೆಯ ದಿನ ನಮ್ಮ ಸಿಬ್ಬಂದಿಗಳು ಕರ್ತವ್ಯದಲ್ಲಿದ್ದ ಬಗ್ಗೆ ದಾಖಲೆಯನ್ನು ಪರಿಶೀಲನೆ ಮಾಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಸರಕಾರದ ಪರವಾಗಿ ಪಿರ್ಯಾದನ್ನು ಹೊರತುಪಡಿಸಿ ಪ್ರತ್ಯೇಕ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಘಟನೆಯ ಬಗ್ಗೆ ನಮಗೆ ಅದೇ ದಿನ ಬೆಳಿಗ್ಗೆ 7.30 ಗಂಟೆಗೆ ಮಾಹಿತಿ ಬಂದಿರುತ್ತದೆ. ಮಾಹಿತಿ ಬಂದಾಗ ನಾನು ಉತ್ತರಕೊಪ್ಪ ಗ್ರಾಮದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದೇನು. ಭಟ್ಕಳ ವಲಯದಿಂದ ಬೆಳಿಗ್ಗೆ 6.00 ಗಂಟೆಗೆ ಹೊರಟಿರುತ್ತೇವೆ. ಭಟ್ಕಳ ವಲಯದಿಂದ ಗುನ್ನಾ ಸ್ಥಳ 31 ಕಿಮೀ ದೂರದಲ್ಲಿ ಇದೆ. ಉತ್ತರಕೊಪ್ಪಕ್ಕೆ ಹೋಗುತ್ತಿರುವ ಬಗ್ಗೆ ನಮ್ಮ ಇಲಾಖೆಯ ಪುಸ್ತಕದಲ್ಲಿ ನಮೂದು ಇದೆ. ಸದರಿ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಉತ್ತರಕೊಪ್ಪಕ್ಕೆ ಹೋಗುವ ದಾರಿ ನೇರ ದಾರಿಯಾಗಿಲ್ಲ ಎಂದರೆ ಸರಿಯಲ್ಲ. ಗಸ್ತು ಕರ್ತವ್ಯಕ್ಕೆ ಉತ್ತರಕೊಪ್ಪಕ್ಕೆ ಹೋಗುವುದು ನಮ್ಮ ಕರ್ತವ್ಯ ಆಗಿತ್ತು. ಗಸ್ತು ಕರ್ತವ್ಯ ಮಾಡುತ್ತಿದ್ದ ಕಾರಣ ಗುನ್ನಾ ಸ್ಥಳದ ಬಗ್ಗೆ ಮಾಹಿತಿ ಇತ್ತು. ಗುನ್ನಾ ಸ್ಥಳವನ್ನು ನಮಗೆ ಯಾರೂ ತೋರಿಸಿಲ್ಲ ಆದರೆ ಮಾಹಿತಿ ಬಂದಿತ್ತು. ಪಂಚನಾಮೆ ಮಾಡುವ ಕಾಲಕ್ಕೆ ನಮ್ಮ ಅಂಗಜಪ್ತಿ ಮಾಡಿದ್ದು ಆ ಬಗ್ಗೆ ಪಂಚನಾಮೆಯಲ್ಲಿ ನಮೂದು ಮಾಡಿದ್ದು ಇರುತ್ತದೆ. ಅದರೆ ಪ್ರತ್ಯೇಕವಾಗಿ ಪಂಚನಾಮೆ ಮಾಡಿಲ್ಲ. ಅಂಗಜಪ್ತಿ ಕಾಲಕ್ಕೆ ಬೇರೆ ಪಂಚರು ಇದ್ದರು. ಗುನ್ನಾ ಸ್ಥಳದ ಅಕ್ಕಪಕ್ಕ 1 – 2 ಮನೆಗಳು ಇವೆ. ಸದರಿ ದಾಳಿಯನ್ನು ಸದರಿ ಮನೆಯವರು ನೋಡಿಲ್ಲ. ಗುನ್ನಾ ಸ್ಥಳದಲ್ಲಿ ತೋಟಗಳು ಇದ್ದ ಕಾರಣ ಜನರು ಓಡಾಡುತ್ತಾ ಇದ್ದರು ಎಂದರೆ ಸರಿಯಲ್ಲ. ದಾಳಿ ಮಾಡುವ ಪೂರ್ವದಲ್ಲಿ ನ್ಯಾಯಾಲಯದಿಂದ ಅನುಮತಿ ಪಡೆದಿಲ್ಲ. ಆದರೆ ಸ್ಥಳದಲ್ಲಿ ಶೋಧನಾ ಸಮುಚ್ಚಿತ ಆಧಾರವನ್ನು ತಯಾರಿಸಿರುತ್ತೇವೆ.ಪಂಚನಾಮೆಯನ್ನು ನಾನೇ ನನ್ನ ಅನುಭವದ ಆಧಾರದ ಮೇಲೆ ಬರೆದು ಪಂಚರ ಸಹಿ ಪಡೆದಿರುತ್ತೇನೆ. ಸರಕಾರಿ ವಾಹನದಲ್ಲಿ ಗುನ್ನಾ ಸ್ಥಳಕ್ಕೆ ಹೋಗಿರುತ್ತೇವೆ . ಸರಕಾರಿ ವಾಹನದ ಚಾಲಕನ್ನು ಸಾಕ್ಷಿದಾರರಾಗಿ ಮಾಡಿಲ್ಲ ಹಾಗೂ ಅವರ ಹೇಳಿಕೆ ಪಡೆದಿಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲುಗಳು ನಮ್ಮ ಇಲಾಖೆಯಲ್ಲಿದ್ದ ಮುದ್ದೆಮಾಲುಗಳು ಅಗಿವೆ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ಗುನ್ನಾ ಸ್ಥಳವು ಯಾವ ಸರ್ವೆ ನಂಬರಿನಲ್ಲಿ ಇದೆ, ಹಾಗೂ ಅದು ಯಾರಿಗೆ ಸೇರಿದ್ದು ಎಂಬ ಬಗ್ಗೆ ದಾಖಲೆಗಳನ್ನು ಪಡೆದಿಲ್ಲ. ಸಂಬಂಧಿಸಿ ಇಲಾಖೆಯವರಿಂದ ಸಹ ದಾಖಲೆಯನ್ನು ಪಡೆದಿಲ್ಲ. ಸರ್ವೆ ಇಲಾಖೆಯಿಂದ ಗುನ್ನಾ ಸ್ಥಳದ ಬಗ್ಗೆ ಮಾಹಿತಿಯನ್ನು ತನಿಖಾಧಿಕಾರಿ ಪಡೆದಿರುತ್ತಾರೆ. ಬೆಲ್ಲದ ಕೊಳೆಯನ್ನು ಎಲ್ಲಿಂದ, ಯಾರಿಂದ ತಂದಿದ್ದರು ಎಂದು ಆರೋಪಿಯನ್ನು ನಾವು ಕೇಳಿಲ್ಲ ಕಾರಣ ಅದು ಆರೋಪಿಗೆ ಸಂಬಂಧಿಸಿದ್ದು ಆಗಿತ್ತು. ಬೆಲ್ಲದ ಕೊಳೆಯನ್ನು ಯಾರಿಗೆಲ್ಲಾ

ಮಾರಾಟ ಮಾಡಿದ ಬಗ್ಗೆ ಆರೋಪಿಗೆ ಗೊತ್ತಿದೆ. ಪಂಚರ ಸಮಕ್ಷಮ ಆರೋಪಿಯ ಸ್ವಖುಷಿ ಹೇಳಿಕೆ ಪಡೆದಿಲ್ಲ. ಕಾರಣ ಅರೋಪಿಗೆ ಕಚೇರಿಗೆ ಹಾಜರಾಗಲು ನೊಟೀಸನ್ನು ಜಾರಿ ಮಾಡಿದ್ದು ಇರುತ್ತದೆ. ಗುನ್ನಾ ಸ್ಥಳದಲ್ಲಿರುವ ಮನೆಯ ಪೊಟೋವನ್ನು ತೆಗೆದಿರುತ್ತೇವೆ. ನಾವು ಹಾಜರುಪಡಿಸಿರುವ ಸರ್ವೆ ನಂಬರು ಯಾವ ಸ್ಥಳದ್ದು ಎಂದು ತನಿಖಾಧಿಕಾರಿಗೆ ಗೊತ್ತಿರುತ್ತದೆ. ಜಪ್ತು ಮಾಡಿದ ಬೆಲ್ಲದ ಕೊಳೆಯನ್ನು ಮೇಲಾಧಿಕಾರಿಗಳ ಪರವಾನಿಗೆ ಮೇರೆಗೆ ನಾಶಪಡಿಸಿರುತ್ತೇವೆ. ನಾವು ಉತ್ತರಕೊಪ್ಪಕ್ಕೆ ಹೋಗಿ ನಾನು ಹೇಳುವ ದಿನಾಂಕಂದು ಯಾವುದೇ ಕರ್ತವ್ಯ ನಿರ್ವಹಿಸಿಲ್ಲ ಹಾಗೂ ಯಾವುದೇ ದಾಳಿ ಮಾಡಿದ್ದೇ ಇಲ್ಲಾ ಹಾಗೂ ಅಂತಹ ಘಟನೆ ನಡೆದಿದ್ದೇ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಮುದ್ದೆ ಮಾಲನ್ನು ಆರೋಪಿಯಿಂದ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇದ್ದ ಮುದ್ದೆಮಾಲುಗಳು ನಮ್ಮ ಇಲಾಖೆಯಲ್ಲಿ ನಾಧಾರಿಯಾಗಿ ಬಿದ್ದಿದ್ದು ಅವುಗಳನ್ನು ಉಪಯೋಗಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿದ್ದೇ ಇಲ್ಲ ಅದು ನಮ್ಮ ಠಾಣೆಯ ಸೃಷ್ಟಿಯಾಗಿದೆ ಎಂದರೆ ಸರಿಯಲ್ಲ. ಪೊಟೋಗಳನ್ನು ನಾವೇ ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ. ಕೃತಕ ಪೊಟೋ ಹಾಗೂ ಕ್ಯಾಮೇರಾವನ್ನು ಸದರಿ ಪ್ರಕರಣಕ್ಕಾಗಿ ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ , ಆರೋಪಿಗೂ ಹಾಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಆರೋಪಿಯಿಂದ ವಶಕ್ಕೆ ಪಡೆದ ಮುದ್ದೆಮಾಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಕಾರಣ ಪರವಾನಿಗೆ ಮೇರೆಗೆ ನಾಶಪಡಿಸಿರುತ್ತೇವೆ. ಆರೋಪಿಯಿಂದ ಯಾವುದೇ ವಸ್ತುಗಳನ್ನು ವಶಪಡಿಸಿಕೊಳ್ಳದೇ ಇದ್ದ ಕಾರಣ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಂಕೆ ಸಂಕೆಗಾಗಿ ಸುಳ್ಳು ಪ್ರಕರಣ ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ. ತೋಟದಲ್ಲಿ ದುಡಿಮೆ ಮಾಡುತ್ತಿದ್ದ ಬಡ ಕಾರ್ಮಿಕರ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**